# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 341(417) |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 16.02.2023 |
| ಉತ್ತರಿಸುವ ಸಚಿವರು | : | ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ) |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ ನಡೆಯುತ್ತಿರುವ ನೀರಾವರಿ ಕಾಮಗಾರಿಗಳಾವುವು; ಇವುಗಳು ಯಾವ ಹಂತದಲ್ಲಿವೆ; (ವಿವರ ಒದಗಿಸುವುದು) | ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಯಡಿಯಲ್ಲಿನ 4 ನಿಗಮಗಳಿಗೆ ರಾಜ್ಯದಲ್ಲಿ ನಡೆಯುತ್ತಿರುವ ನೀರಾವರಿ ಕಾಮಗಾರಿಗಳ ಹಂತಗಳನ್ನು ನಿಗಮವಾರು ವಿವರಗಳನ್ನು ಅನುಬಂಧ-1,2,3,4ರಲ್ಲಿ ನೀಡಲಾಗಿದೆ. |
| ಆ | ರಾಜ್ಯದ ಎಷ್ಟು ನೀರಾವರಿ ಯೋಜನೆಗಳು ರಾಷ್ಟ್ರೀಯ ಯೋಜನೆಗಳಾಗಿವೆ; ಇತರೆ ಯಾವ ನೀರಾವರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಗಳನ್ನಾಗಿ ಯೋಜಿಸಲಾಗಿದೆ: | ರಾಜ್ಯದ ಯಾವುದೇ ನೀರಾವರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಣೆಯಾಗಿರುವುದಿಲ್ಲ.<br><br>ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಯಡಿಯಲ್ಲಿನ ಬರುವ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು ಪ್ರಸ್ತಾವನೆಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದ್ದು, ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ. |
| ಇ | ನೀರಾವರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಲು ಇರುವ ಮಾನದಂಡಗಳೇನು: | ನೀರಾವರಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಲು ಕೇಂದ್ರವು ಕೆಲವು ಮಾರ್ಗಸೂಚಿಗಳನ್ನು ನೀಡಿದ್ದು, ಈ ಕೆಳಗಿನಂತಿವೆ:<br>*"(a) International projects where usage of water in India is required by a treaty or where planning and early completion of the project is necessary in the interest of the country.*<br>*(b) Inter-State projects which are dragging on due to non resolution of Inter-State issues relating to sharing of costs, rehabilitation, aspects of power production etc., including river interlinking projects.*<br>*(C) Intra-State projects with additional potential of more than 2,00,000 hectare (ha) and with no dispute regarding sharing of water and where hydrology is established".* |
| ಈ | ರಾಷ್ಟ್ರೀಯ ಯೋಜನೆಯಿಂದಾಗಿ ಯಾವ ಅನುಪಾತದಲ್ಲಿ ಹಣ ಒದಗಿಸಲಾಗುವುದು? (ವಿವರ ನೀಡುವುದು) | ಕೇಂದ್ರ ಸರ್ಕಾರದ ಹಣಕಾಸಿನ ನೆರವನ್ನು ನೀಡುವಾಗ ಉಳಿಕೆ ಕಾಮಗಾರಿಗಳ ಮೊತ್ತದಲ್ಲಿ ಸಿಬ್ಬಂದಿ ವೆಚ್ಚ; ಆಡಳಿತಾತ್ಮಕ ವೆಚ್ಚ; ವಿತರಣಾ ವ್ಯವಸ್ಥೆಯ ವೆಚ್ಚ ಇತ್ಯಾದಿಗಳನ್ನು ಹೊರತುಪಡಿಸಿದಂತಹ ಮೊತ್ತಕ್ಕೆ 60(ಕೇಂದ್ರ): 40(ರಾಜ್ಯ) ಅನುಪಾತದಲ್ಲಿ ಹಣವನ್ನು ಒದಗಿಸಲಾಗುತ್ತದೆ. |

**ಸಂಖ್ಯೆ: ಜಸಂಇ 21 ಎಂಎಲ್ಎ 2023**

**(ಗೋವಿಂದ ಎಂ.ಕಾರಜೋಳ)**
**ಜಲಸಂಪನ್ಮೂಲ ಸಚಿವರು**

# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

## ಅನುಬಂಧ –1

| ಕ್ರಮ ಸಂ. | ಯೋಜನೆಯ ಹೆಸರು | ಪ್ರಸ್ತುತ ಹಂತ |
|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 | • ಕೃಷ್ಣಾ ಮೇಲ್ದಂಡೆ ಯೋಜನೆ (ಕೃ.ಮೇ.ಯೋ) ಹಂತ–3ರಡಿ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟ, ಗುಲಬರ್ಗಾ, ಯಾದಗಿರ್, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿಯ ಒಟ್ಟು 5.94 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸುವುದಾಗಿರುತ್ತದೆ. ಕರ್ನಾಟಕ ಸರ್ಕಾರದ ಅನುಮೋದನೆಯಂತೆ ಕೃ.ಮೇ.ಯೋ. ಹಂತ–3ರಡಿಯ ಉಪಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕೃಷ್ಣಾ ಜಲವಿವಾದ ನ್ಯಾಯಾಧೀಕರಣ–2 (KWDT-II) ತೀರ್ಪು ಕುರಿತು ಭಾರತ ಸರ್ಕಾರದ ಅಧಿಸೂಚನೆಯನ್ನು ನಿರೀಕ್ಷಿಸಲಾಗಿದೆ. ಅಂತರರಾಜ್ಯ ಜಲವಿವಾದ ನಾಯಾಧಿಕರಣ–2ವು ಕೃ.ಮೇ.ಯೋ.ಗಾಗಿ ಹಂಚಿಕೆಮಾಡಿರುವ 130 ಟಿಎಂಸಿ ನೀರನ್ನು ಉಪಯೋಗಿಸುವುದು ವಿಶೇಷ ಅನುಮತಿ ಅರ್ಜಿ ಹಾಗೂ ಇನ್ನಿತರೆ ಅರ್ಜಿಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಪಿಗೆ ಒಳಪಟ್ಟಿರುತ್ತದೆ. ಇದಲ್ಲದೇ, ಕೃ.ಮೇ.ಯೋ. ಹಂತ–3 ರಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ ಜಮೀನುಗಳ ಭೂಸ್ವಾಧೀನತೆ ಮತ್ತು 20 ಗ್ರಾಮಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣವೂ ಸಹ ಕೃಮೇಯೋ ಹಂತ–3ರಲ್ಲಿ ಒಳಗೊಂಡಿರುತ್ತದೆ.<br>• ಕೃಮೇ.ಯೋ. ಹಂತ–3 ರಡಿಯ ಅನುಷ್ಠಾನಗೊಳಿಸಬೇಕಿರುವ 9 ಉಪ-ಯೋಜನೆಗಳ ಪೈಕಿ ಈಗಾಗಲೇ ಮುಳವಾಡ, ಚಿಮ್ಮಲಗಿ, ಇಂಡಿ, ರಾಂಪುರ, ಮಲ್ಲಾಬಾದ್, ಕೊಪ್ಪಳ ಹಾಗೂ ಹೇರಕಲ್ ಏತ ನೀರಾವರಿ ಯೋಜನೆಗಳು ಮತ್ತು ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಹಾಗೂ ಭೀಮಾ ಫ್ಲಾಂಕ್ ಉಪ ಯೋಜನೆಗಳು ಈಗಾಗಲೇ ಪ್ರಗತಿಯ ವಿವಿಧ ಹಂತದಲ್ಲಿರುತ್ತವೆ. ಇದರ ಜೊತೆಗೆ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್‌ನಿರ್ಮಾಣ ಮತ್ತು ಪುನರ್ವಸತಿ, ಹಿನ್ನೀರಿನಲ್ಲಿ ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ ಹಾಗೂ ಬಾಗಲಕೋಟೆ ಪಟ್ಟಣದಡಿಯ ಪುನರ್ವಸತಿ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತವೆ. |
| 2 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | • ಯೋಜನೆಯ ಮೊದಲನೇ ಹಂತ ಪೂರ್ಣಗೊಂಡಿದ್ದು, 14,493 ಹೆ. ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ ಹಾಗೂ ಪೂರ್ಣಗೊಂಡ ಕಾಲುವೆ ಜಾಲದಡಿ ನೀರನ್ನು ಹರಿಸಲಾಗಿರುತ್ತದೆ. ಯೋಜನೆಯ 2ನೇ ಹಂತದಡಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 24,000 ಹೆ. ಕ್ಷೇತ್ರಕ್ಕೆ ಸಾಂಪ್ರದಾಯಿಕ ಕಾಲುವೆ ಜಾಲದ ಬದಲಾಗಿ ಹನಿ ನೀರಾವರಿ ಕಲ್ಪಿಸಲು 2 ಪ್ಯಾಕೇಜ್‌ಗಳಡಿ ಕೈಗೆತ್ತಿಕೊಂಡ ಯೋಜನಾ ಕಾಮಗಾರಿಗಳು ಪೂರ್ಣಗೊಂಡಿದ್ದು, 2020ನೇ ಸಾಲಿನ ಮುಂಗಾರು ಹಂಗಾಮಿನಿಂದ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. |
| 3 | ತಿಮ್ಮಾಪುರ ಏತ ನೀರಾವರಿ ಯೋಜನೆ | • ಯೋಜನೆಯು ಪೂರ್ಣಗೊಂಡಿದ್ದು, ಬಾಗಲಕೋಟೆ ತಾಲ್ಲೂಕಿನಡಿ 17,881 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. |
| 5 | ತೆಗ್ಗಿ–ಸಿದ್ದಾಪುರ ಏತ ನೀರಾವರಿ ಯೊಜನೆ | • ಯೋಜನೆಯು ಪೂರ್ಣಗೊಂಡಿದ್ದು, ಬೀಳಗಿ ತಾಲ್ಲೂಕಿನಡಿ 3,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 6 | ರೊಳ್ಳಿ–ಮನ್ನಿಕೇರಿ ಏತ ನೀರಾವರಿ ಯೋಜನೆ | • ಯೋಜನೆಯು ಪೂರ್ಣಗೊಂಡಿದ್ದು, ಬೀಳಗಿ ತಾಲ್ಲೂಕಿನಡಿ 2,350 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 7 | ಸನ್ನತಿ ಏತ ನೀರಾವರಿ ಯೋಜನೆ | • ಭೀಮಾ ನದಿಗೆ ಅಡ್ಡಲಾಗಿ ಸನ್ನತಿ ಗ್ರಾಮದ ಹತ್ತಿರ ಸನ್ನತಿ ಬ್ರಿಡ್ಜ್–ಕಂ–ಬ್ಯಾರೇಜಿನ ಸಿವಿಲ್ ಮತ್ತು 37 ವರ್ಟಿಕಲ್ ಗೇಟುಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಬ್ಯಾರೇಜಿನಡಿ ನೀರು ಸಂಗ್ರಹಿಸಲಾಗಿದೆ. |

| ಕ್ರಮ ಸಂ. | ಯೋಜನೆಯ ಹೆಸರು | ಪ್ರಸ್ತುತ ಹಂತ |
|---|---|---|
| | | • ಸನ್ನತಿ ಬ್ಯಾರೇಜಿನಡಿ ಸಂಗ್ರಹಗೊಂಡ ನೀರನ್ನು ಸನ್ನತಿ ಏತ ನೀರಾವರಿ ಯೋಜನೆ ಮುಖಾಂತರ ಲಿಫ್ಟ್ ಮಾಡಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ಮತ್ತು ಯಾದಗಿರ್ ಜಿಲ್ಲೆಯ ಯಾದಗಿರ್ ತಾಲ್ಲೂಕುಗಳಡಿಯ 16,000 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಟರ್ನ್‌ಕೀ ಆಧಾರದ ಮೇಲೆ ವಹಿಸಲಾದ ಮುಖ್ಯ ಸ್ಥಾವರದ ಬಾಕಿ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದೆ (ಇನ್‌ಟೇಕ್ ಕಾಲುವೆಯ ಸಿ.ಸಿ. ಲೈನಿಂಗ್ ಹೊರತುಪಡಿಸಿ) ಹಾಗೂ ಪ್ರಾಯೋಗಿಕ ಕಾರ್ಯಾರಂಭ ಮಾಡಲಾಗಿದೆ.<br>• ಯೋಜನೆಯ ಫೀಡರ್ ಕೆನಾಲ್ ಕಿ.ಮೀ.0.00ದಿಂದ 1.75ರ ಕಾಮಗಾರಿ ಹಾಗೂ ರೈಲ್ವೇ ಕ್ರಾಸಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಮುಂದುವರೆದು, ಸನ್ನತಿ ಮುಖ್ಯ ಕಾಲುವೆ ಕಿ.ಮೀ. 0.00ರಿಂದ 40.00 (ಅಕ್ವಡಕ್ಟ್ ಒಳಗೊಂಡಂತೆ), ಸನ್ನತಿ ಶಾಖಾ ಕಾಲುವೆ ಕಿ.ಮೀ. 0.00ರಿಂದ 18.10, ವಿತರಣಾ ಕಾಲುವೆ ಸಂ.1 ಕಿ.ಮೀ. 0.00ದಿಂದ 15.00 ಮತ್ತು ಯರಗೋಳ ಮೈನರ್ ಕಾಲುವೆ ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿವೆ. 2018-19ನೇ ಸಾಲಿನಲ್ಲಿ ಯೋಜನೆಯಡಿ ಪೂರ್ಣಗೊಂಡ ಕಾಲುವೆ ಜಾಲದಡಿ ನೀರು ಹರಿಬಿಡಲಾಗಿದೆ.<br>• ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಸಚಿವಾಲಯದ ಕೇಂದ್ರ ಜಲ ಆಯೋಗವು ಸನ್ನತಿ ಏತ ನೀರಾವರಿ ಯೋಜನೆಯ ರೂ.673.90 ಕೋಟಿ (2012-13ನೇ ದರಗಳನ್ವಯ) ಮೊತ್ತದ ಯೋಜನಾ ವರದಿಗೆ ಅನುಮೋದನೆ ನೀಡಿರುತ್ತದೆ. ಯೋಜನೆಗೆ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ "ಪರಿಸರ ತೀರುವಳಿ" ಯನ್ನು ಜನವರಿ 2015ರಲ್ಲಿ ಪಡೆಯಲಾಗಿರುತ್ತದೆ.<br>• ಕೇಂದ್ರ ಸಹಾಯಧನ ಎಐಬಿಪಿ ಅಡಿ ಪ್ರಸ್ತಾಪಿಸಲಾದ ಸೊಂತಿ ಏತ ನೀರಾವರಿ ಯೋಜನೆ ಕುರಿತಂತೆ ದಿನಾಂಕ 10.02.2017ರಂದು ಜರುಗಿದ Investment clearance ಸಮಿತಿ, ಕೇಂದ್ರ ಜಲಶಕ್ತಿ ಮಂತ್ರಾಲಯ, ನವದೆಹಲಿ ಸಭೆಯ ನಡವಳಿಯಲ್ಲಿ 0.78 ಹೆಕ್ಟೇರ್ ಪ್ರದೇಶದ ಅರಣ್ಯ ಪ್ರದೇಶ ಉಪಯೋಗಿಸುವ ಸಂಬಂಧ ಹಂತ-2 ರ ಪರಿಸರ ತಿರುವಳಿ ಪಡೆದು ದೃಢೀಕರಣ ಪತ್ರದೊಂದಿಗೆ ವಿವರವಾದ ಯೋಜನಾ ವರದಿಯನ್ನು ಮರು ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರನ್ವಯ ಪರಿಸರ ದೃಢೀಕರಣ ಪತ್ರವನ್ನು ದಿನಾಂಕ 03.02.2020 ರಂದು ಪಡೆಯಲಾಗಿದ್ದು, ಪರಿಷ್ಕೃತ ರೂ.804.66 ಕೋಟಿ ಮೊತ್ತದ ಯೋಜನಾ ವರದಿಗೆ Investment clearance ಸಮಿತಿ ಸಭೆಯ ನಡವಳಿಯಲ್ಲಿ ನಿರ್ದೇಶಿಸಿರುವಂತೆ ಕೇಂದ್ರ ಸರ್ಕಾರದಿಂದ ಸಹಾಯಧನ ಪಡೆಯಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.<br>• ಸನ್ನತಿ ಏತ ನೀರಾವರಿ ಯೋಜನೆಯಡಿ ಜನವರಿ 2023ರ ಅಂತ್ಯದವರೆಗೆ ಒಟ್ಟಾರೆ 10,650ಹೆಕ್ಟೇರ್ ಕ್ಷೇತ್ರದ ಔಟ್‌ಲೆಟ್ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ. |
| 8 | ನಾರಾಯಣಪುರ ಬಲದಂಡೆ ಕಾಲುವೆ (ನಾಬದಂಕಾ) ವಿತರಣಾ ಕಾಲುವೆ ಸಂ.9(ಎ) | • ನಾರಾಯಣಪುರ ಬಲದಂಡೆ ಕಾಲುವೆ (ನಾಬದಂಕಾ) ವಿತರಣಾ ಕಾಲುವೆ ಸಂ.9(ಎ) ಕಿ.ಮೀ. 0.00 ರಿಂದ 29.15 ಹಾಗೂ ಅರಕೇರಾ ಶಾಖಾ ಕಾಲುವೆ ಕಿ.ಮೀ. 0.00 ರಿಂದ 22.00 ರವರೆಗಿನ ಲ್ಯಾಟರಲ್ ಕಾಮಗಾರಿಗಳು ಒಳಗೊಂಡಂತೆ ಪೂರ್ಣಗೊಂಡಿದ್ದು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಮುಂದುವರೆದು, ಯೋಜನೆಯಡಿ ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 10.00 ಪೂರ್ಣಗೊಂಡಿದ್ದು, ಕಿ.ಮೀ.10.00 ರಿಂದ 28.00 ರವರೆಗಿನ ಕಾಲುವೆ ಜಾಲದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಪೂರ್ಣಗೊಂಡ ಕಾಲುವೆ ಜಾಲಕ್ಕೆ ನೀರನ್ನು ಪ್ರಾಯೋಗಿಕವಾಗಿ ಹರಿಸಲಾಗಿದೆ. |
| 9 | ನಂದವಾಡಗಿ ಏತ ನೀರಾವರಿ ಯೋಜನೆ | • ಯೋಜನೆಗೆ ಸರ್ಕಾರವು ದಿನಾಂಕ:01.03.2014 ರಲ್ಲಿ ರೂ.1530.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಪ್ರಸ್ತುತ ನಂದವಾಡಗಿ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದ ಟರ್ನ್ ಕೀ ಆಧಾರದ ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಕಾಮಗಾರಿಗಳನ್ನು 3 |

| ಕ್ರಮ ಸಂ. | ಯೋಜನೆಯ ಹೆಸರು | ಪ್ರಸ್ತುತ ಹಂತ |
|---|---|---|
| | | ಪ್ಯಾಕೇಜ್‌ಗಳಲ್ಲಿ ಬ್ಲಾಕ್-ಎ (12,000 ಹೆ.), ಬ್ಲಾಕ್-ಬಿ (12,500 ಹೆ.) ಮತ್ತು ಬ್ಲಾಕ್-ಸಿ (11,600 ಹೆ.) ಕೈಗೆತ್ತಿಕೊಂಡು ಕಾಮಗಾರಿ ಪ್ರಗತಿಯಲ್ಲಿದೆ. |
| 10 | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ | • ಸರ್ಕಾರವು ದಿನಾಂಕ:20.07.2016 ರಲ್ಲಿ ರೂ.840.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದಲ್ಲದೆ, ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಉದ್ದೇಶಿತ 20,243 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗೆ ಪೈಪ್‌ಲೈನ್ ಜಾಲ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. |
| 11 | ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆ ವಿಸ್ತರಣೆ | • ಸರ್ಕಾರವು ಎಸ್‌ಸಿಪಿ/ಟಿಎಸ್‌ಪಿರಡಿ ದಿನಾಂಕ:09.11.2020 ರಲ್ಲಿ ರೂ.549.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯು 17,805 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಸ್ಕಾಡಾ ಸೇರಿದಂತೆ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿ ಪ್ರಗತಿಯಲ್ಲಿದೆ. |
| 12 | ನಾಗರಬೆಟ್ಟ ಏತ ನೀರಾವರಿ ಯೋಜನೆ | • ಸರ್ಕಾರವು ದಿನಾಂಕ:12.09.2017 ರಲ್ಲಿ ರೂ.170.70 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ವಹಿಸಲಾದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿ ಪ್ರಗತಿಯಲ್ಲಿದೆ. |
| 13 | ಚಡಚಣ ಏತ ನೀರಾವರಿ ಯೋಜನೆ | • ಸರ್ಕಾರವು ದಿನಾಂಕ:29.08.2016 ರಲ್ಲಿ ರೂ.413.20 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಈ ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯಡಿ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಯಡಿ ಪ್ರಥಮ ಬಾರಿಗೆ ಉದ್ದೇಶಿತ 9,215 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಪೈಪ್ ಲೈನ್ ಜಾಲದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಸದರಿ ಯೋಜನೆಗೆ ಅವಶ್ಯವಿರುವ ನೀರನ್ನು ಸಂಗ್ರಹಿಸಲು ಉಮ್ರಾಣಿ ಹತ್ತಿರ ಬ್ಯಾರೇಜ್‌ಅನ್ನು ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| 14 | ಹೆರಕಲ್ (ದಕ್ಷಿಣ) ಏತ ನೀರಾವರಿ ಯೋಜನೆ ವಿಸ್ತರಣೆ | • ಸರ್ಕಾರವು ದಿನಾಂಕ:08.11.2017 ರಲ್ಲಿ ರೂ.238.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಯಡಿ ಕೈಗೊಳ್ಳಲಾದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಯು ಪೂರ್ಣಗೊಂಡಿದೆ. ಉದ್ದೇಶಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ಕಾಮಗಾರಿ ಪ್ರಗತಿಯಲ್ಲಿದೆ. |
| 15 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | • ಸರ್ಕಾರವು ದಿನಾಂಕ:12.09.2017 ರಲ್ಲಿ ರೂ.35.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಯಡಿ ಕೈಗೊಳ್ಳಲಾದ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಯಲ್ಲಿದೆ. ಕಾಲುವೆ ಜಾಲದ ಕಾಮಗಾರಿಗಳೂ ಸಹ ಪ್ರಗತಿಯಲ್ಲಿದೆ. |
| 16 | ಕೆರೂರ ಏತ ನೀರಾವರಿ ಯೋಜನೆ | • ಸರ್ಕಾರವು ದಿನಾಂಕ:06.03.2021ರಲ್ಲಿ ರೂ.525.00 ಕೋಟಿ ಅಂದಾಜು ಮೊತ್ತದ ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಯೋಜನೆಗೆ ಅವಶ್ಯಕ ಪರಿಸರ ತೀರುವಳಿ ಸಹ ಪಡೆಯಲಾಗಿರುತ್ತದೆ. ಯೋಜನೆಯು 16,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಯೋಜನೆಯ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿ ಪ್ರಗತಿಲ್ಲಿದೆ. |

*****

# ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

## ಅನುಬಂಧ –2

| ಕ್ರಮ ಸಂ. | ಯೋಜನೆಯ ಹೆಸರು | ಪ್ರಸ್ತುತ ಹಂತ |
|---|---|---|
| 1 | ಭದ್ರಾ ಮೇಲ್ದಂಡೆಯೋಜನೆ | ಭದ್ರಾ ಮೇಲ್ದಂಡೆಯೋಜನೆಯಡಿ29.9 ಟಿ.ಎಂ.ಸಿ ನೀರನ್ನು ಬಳಸಿಕೊಂಡು ಮಧ್ಯಕರ್ನಾಟಕದ ಬರಪೀಡಿತ ಚಿತ್ರದುರ್ಗ, ಚಿಕ್ಕಮಗಳೂರು, ದಾವಣಗೆರೆ ಹಾಗೂ ತುಮಕೂರು ಜಿಲ್ಲೆಯಲ್ಲಿನ 2,25,515 ಹೆಕ್ಟೇರ್ (5,57,022 ಎಕರೆ)ಭೂ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಪದ್ಧತಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ ಇದೇ ಜಿಲ್ಲೆಗಳಡಿ ಬರುವ 367 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ 50 ರಷ್ಟಕ್ಕೆ ನೀರು ತುಂಬಿಸಲು ಯೋಜಿಸಲಾಗಿರುತ್ತದೆ. ಸದರಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.21473.67ಕೋಟಿಗಳು.<br><br>__ಹಂತ–1__<br>• ಪ್ರಥಮ ಹಂತದಲ್ಲಿನತುಂಗಾ ನದಿಯಿಂದ ಭದ್ರಾಜಲಾಶಯಕ್ಕೆ ಲಿಫ್ಟ್ ಮಾಡುವ (ಪ್ಯಾಕೇಜ–1) ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದಂತೆ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದವರೆಗೆ ನೀರನ್ನು ಲಿಫ್ಟ್ ಮಾಡುವ(ಪ್ಯಾಕೇಜ–2) ಮತ್ತು ಅಜ್ಜಂಪುರ ಸುರಂಗ ನಿರ್ಮಾಣ ಮಾಡುವ (ಪ್ಯಾಕೇಜ–3) ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ.<br>• ಯೋಜನೆಯಡಿ ಬರುವ ಪ್ಯಾಕೇಜ್–2 ಮತ್ತು 3ರ ಕಾಮಗಾರಿಗಳನ್ನು ಪೂರ್ಣಗೊಳಿಸಿ ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದ ಮೂಲಕ ನೀರನ್ನು 2019–2020ನೇ ಸಾಲಿನಿಂದ ವಾಣಿ ವಿಲಾಸ ಸಾಗರಕ್ಕೆ ಹರಿಸಲಾಗಿರುತ್ತದೆ.<br><br>__ಹಂತ–2__<br>• ಎರಡನೇ ಹಂತದಲ್ಲಿ ಬರುವ ತರೀಕೆರೆ ಏತ ನೀರಾವರಿ, ಚಿತ್ರದುರ್ಗ ಶಾಖಾ ಕಾಲುವೆ, ಜಗಳೂರು ಶಾಖಾ ಕಾಲುವೆ ಮತ್ತು ತುಮಕೂರು ಶಾಖಾ ಕಾಲುವೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.<br>• ಹನಿ ನೀರಾವರಿ: ಯೋಜನೆಯಡಿ ಚಿತ್ರದುರ್ಗ ಶಾಖಾ ಕಾಲುವೆಯ, ತುಮಕೂರು ಶಾಖಾ ಕಾಲುವೆಯ ಮತ್ತು ಜಗಳೂರು ಶಾಖಾ ಕಾಲುವೆಯಡಿ ಹನಿ ನೀರಾವರಿ ಸೌಲಭ್ಯಕಲ್ಪಿಸುವ 7 ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>• ಫೀಡರ್ ಕಾಲುವೆಗಳು: ಚಿತ್ರದುರ್ಗ ಶಾಖಾ ಕಾಲುವೆಯಡಿ ಬರುವ ಹೊಳಲ್ಕೆರೆ ಫೀಡರ್‌ಕಾಲುವೆಯ3 ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>• ಕೆರೆತುಂಬಿಸುವ ಕಾಮಗಾರಿಗಳು:ಚಳ್ಳಕೆರೆ ಮತ್ತು ಮೊಳಕಾಲ್ಮೂರು, ಪಾವಗಡ, ಶಿರಾ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕೆರೆಗಳನ್ನು ತುಂಬಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>ಯೋಜನೆಗೆ ಪ್ರಾರಂಭದಿಂದ ಇಲ್ಲಿಯವರೆಗೆ (ಜನವರಿ–2023 ರಅಂತ್ಯಕ್ಕೆ) ಒಟ್ಟಾರೆ ರೂ.6860.90ಕೋಟಿಗಳ ಸಂಚಿತವೆಚ್ಚ ಮಾಡಲಾಗಿರುತ್ತದೆ. |

# ಕಾವೇರಿ ನೀರಾವರಿ ನಿಗಮ ನಿಯಮಿತದ

## ಅನುಬಂಧ-೩.

Rs in crores

| ಕ್ರಮ ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಷರಾ |
|---|---|---|---|
| 1 | ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಸರಗೂರು ಗ್ರಾಮದ ಬಳಿ ಕಾವೇರಿ ನದಿಯಿಂದ ನೀರನ್ನು ಎತ್ತಿ ಗುಂಡಾಲ್ ಜಲಾಶಯದ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೂದಗಿಸುವುದು ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಎರಡು ಕೆರೆಗಳಿಗೆ ನೀರು ತುಂಬಿಸುವುದು. (ರಾಮನಗುಡ್ಡ ಮತ್ತು ಹುಬ್ಬೆ ಹುಣಸೆ ಕೆರೆ) | 129.00 | Pump house civil work under progress and pumps, motors and transformer procured & erection works Completed.<br>Delivery chamber-1 ,Delivery chamber -2 & Gravity main to Gundal reservoir work completed.<br>13 km raising main completed.<br>Gravity main- Out of 18.528 km length, 7.375 km completed, Balance (Hubbe Hunase & Ramanagudda 11.153 km) is under progress.<br>Electrical sub-station work completed & Transmission line work completed. Electrical Line charged.<br>Concrete Road to Pump house is completed, Compound wall is Under Progress.<br>ಗುಂಡಾಲ್ ಜಲಾಶಯಕ್ಕೆ ಪ್ರಾಯೋಗಿಕವಾಗಿ ಚಾಲನೆ ಮಾಡಿ ನೀರನ್ನು ಹರಿಸಲಾಗಿರುತ್ತದೆ. ರಾಮನಗುಡ್ಡ ಮತ್ತು ಹುಬ್ಬೆಹುಣಸೇ ಪೈಪ್ ಲೈನ್ ಕಾಮಗಾರಿಗಳನ್ನು ಮಾಡಬೇಕಾಗಿರುತ್ತದೆ. |
| ೨ | ರಾಮನಗರ ಜಿಲ್ಲೆ, ಚನ್ನಪಟ್ಟಣ, ರಾಮನಗರ, ಮಾಗಡಿ ಮತ್ತು ಕನಕಪುರ ತಾಲೂಕುಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸತ್ಯಗಾಲದ ಸಮೀಪದಲ್ಲಿ ಕಾವೇರಿ ನದಿಯಿಂದ ಇಗ್ಗಲೂರು ಹತ್ತಿರದ ಹೆಚ್.ಡಿ.ದೇವೇಗೌಡ ಬ್ಯಾರೇಜ್‌ಗೆ ಗುರುತ್ವಾಕರ್ಷಣೆ ಮೂಲಕ ನೀರು ಹರಿಸುವುದು. | 540.00 | ಗ್ರಾವಿಟಿ ಮೈನ್: ಸುರಂಗ (ಟನಲ್) ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಒಟ್ಟಾರೆ 11.24 ಕಿ.ಮೀ ಗ್ರಾವಿಟಿ ಮೈನ್ ಪೈಕಿ 7.12 ಕಿ.ಮೀ ಕಾಮಗಾರಿಯು ಪೂರ್ಣಗೊಂಡಿರುತ್ತದೆ. 14.20 ಕಿ.ಮೀ ಉದ್ದದ ಎಂ.ಎಸ್ ಪೈಪ್‌ನಲ್ಲಿ 7.12 ಕಿ.ಮೀ ಉದ್ದದ ಕಾಮಗಾರಿ ಪೂರ್ಣಗೊಂಡಿದೆ.<br>**ಮೊದಲನೇ ಹಂತ:** ಪಂಪ್ ಹೌಸ್ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದ್ದು, ಇಳಿ, ಏರುಕೊಳವೆ ಕಾಮಗಾರಿ ಪ್ರಗತಿಯಲ್ಲಿದೆ. ಒಟ್ಟಾರೆ 5.92 ಕಿ.ಮೀ ಉದ್ದದ ಏರು ಕೊಳವೆ ಪೈಕಿ 5.76 ಕಿ.ಮೀ ಉದ್ದಕ್ಕೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>**ಎರಡನೇ ಹಂತ:**<br>ಪಂಪ್ ಹೌಸ್ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>ಕಣ್ವ ಪಂಪ್‌ಹೌಸ್‌ನಿಂದ ಮಂಚನಬೆಲೆ ವರೆಗಿನ ಒಟ್ಟಾರೆ 25.64 ಕಿ.ಮೀ ಉದ್ದದ ಏರುಕೊಳವೆ ಪೈಕಿ 24.64 ಕಿ.ಮೀ ಉದ್ದಕ್ಕೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>ಕಣ್ವ ಪಂಪ್‌ಹೌಸ್‌ನಿಂದ ವೈ.ಜಿ.ಗುಡ್ಡ ವರೆಗಿನ 20.85 ಕಿ.ಮೀಗಳ ಉದ್ದದ ಏರುಕೊಳವೆ ಕಾಮಗಾರಿಯು ಪೂರ್ಣಗೊಂಡಿದ್ದು, ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ. |
| ೩ | ಹಾರಂಗಿ ಯೋಜನೆಯ ಎಡದಂಡೆ ನಾಲೆಯ ಸರಪಳಿ 27 ರಿಂದ 85.90 ಕಿ.ಮೀ | 116.00 | 53.60 ಕಿ.ಮೀ ಉದ್ದದ ಪೇವರ್ ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>ಕವರ್‌ಡಕ್ಟ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>ಗ್ರಾವಿಟಿ ವಾಲ್ ಉದ್ದ 3.00 ಕೀಮೀ ರಲ್ಲಿ 2.40 ಕಿ ಮೀ ಪೂರ್ಣಗೊಂಡಿರುತ್ತದೆ.,<br>ಒಟ್ಟು ಅಡ್ಡಮೋರಿಗಳ ಸಂಖ್ಯೆ-405, ಪೂರ್ಣಗೊಂಡಿರುವ ಅಡ್ಡಮೋರಿಗಳ ಸಂಖ್ಯೆ 205, ಉಳಿಕೆ 200 ಅಡ್ಡಮೋರಿಗಳ ಕಾಮಗಾರಿಯನ್ನು ಪ್ರಾರಂಭಿಸಬೇಕಿರುತ್ತದೆ. |
| ೪ | ಕೆ.ಆರ್.ಎಸ್. ಯೋಜನೆಯಡಿ ಬರುವ ವಿಶ್ವೇಶ್ವರಯ್ಯ ಮುಖ್ಯ ನಾಲೆಯ ಸರಪಳಿ 0.00 ರಿಂದ 46.25 ಕಿ.ಮೀ ರವರೆಗೆ ಆಧುನೀಕರಣ ಕಾಮಗಾರಿ- ಹಂತ 2 ರಲ್ಲಿಯ ಪ್ಯಾಕೇಜ್ 1 ಎ | 300.00 | 1.85km bed ಲೈನಿಂಗ್ ಕಾಮಗಾರಿ, ಪೂರ್ಣಗೊಂಡಿದೆ. ನಾಲೆಯಲ್ಲಿ ನೀರು ಹರಿಯುತ್ತಿರುವುದರಿಂದ ಪ್ರಸ್ತುತ ಕಾಮಗಾರಿ ಸ್ಥಗಿತಗೊಂಡಿರುತ್ತದೆ.<br>4.65 Sectioning completed. ಸಿಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |
| ೫ | ಮಳವಳ್ಳಿ ತಾಲ್ಲೂಕು ಪೂರಿಗಾಲಿ ಸೂಕ್ಷ್ಮ ನೀರಾವರಿ ಯೋಜನೆ | 593.00 | ) ಮುಖ್ಯ ವಿತರಣಾ ತೊಟ್ಟಿ ಪೂರ್ಣಗೊಂಡಿದೆ,<br>2) ಪಂಪ್ ಹೌಸ್,ಫೋರ್ ಬೇ ಮತ್ತು ಇನ್‌ಟೇಕ್ ಚಾನೆಲ್ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>3) ಎಲೆಕ್ಟ್ರಿಕಲ್ ಸಬ್ ಸ್ಟೇಷನ್‌ನ ಕಾಮಗಾರಿಯು ಪೂರ್ಣಗೊಂಡಿದ್ದು, ಖಿಡಿಚಿಟಿಖುಟಿ ಣಾಶಿಜಿಡಿ &ಟುಟಿಜಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>4) ರೈಸಿಂಗ್ ಮೇನ್ (ಎಂ.ಎಸ್ ಪೈಪ್) ಉದ್ದ ಒಟ್ಟು 45.645 ಕಿಮೀ ಉದ್ದವಿದ್ದು ಪೂರ್ಣಗೊಂಡಿರುತ್ತದೆ.<br>5) ವಿತರಣಾ ಜಾಲ (ಹೆಚ್.ಡಿ.ಪಿ.ಇ ಮತ್ತು ಪಿ.ವಿ.ಸಿ ಪೈಪ್)ದ ಉದ್ದ 317.516 ಕಿ.ಮೀ ಇದ್ದು ಪೂರ್ಣಗೊಂಡಿರುತ್ತದೆ.<br>6) Staff Quartres ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>8) ಎಲ್ಲಾ 22 ಟವರ್ ಅಳವಡಿಕೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ..<br>9) 1020 (10 ಹೆಕ್ಟೆರ್) ಬ್ಲಾಕ್‌ಗಳ ಪೈಕಿ 780 ಬ್ಲಾಕ್‌ಗಳು ಪೂರ್ಣಗೊಂಡಿರುತ್ತದೆ.<br>10) 26 ಸಂಖ್ಯೆ ಹೆಡ್ ಕಂಟ್ರೋಲ್ ರೂಂ ನಿರ್ಮಾಣದ ಪೈಕಿ 17 ಸಂಖ್ಯೆ ಕಂಟ್ರೋಲ್ ರೂಂ ಪೂರ್ಣಗೊಂಡಿರುತ್ತದೆ. ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br>11) ಯೋಜನೆಯ ಪಂಪ್‌ಹೌಸ್, ರೈಸಿಂಗ್ ಮೈನ್, ವಿತರಣಾ ತೊಟ್ಟಿ ಮತ್ತು ಹೆಡ್ ಕಂಟ್ರೋಲ್ ರೂಮ್‌ಗಳಿಗೆ ಅವಶ್ಯಕವಾಗಿರುವ 35-11-12 ಎಕರೆಯ ಜಮೀನಿನಲ್ಲಿ ಒಟ್ಟು 152 ಖಾತೆದಾರರು ಇರುತ್ತಾರೆ. ಈ ಪೈಕಿ 66 ಸರ್ವೆ ನಂ.ಗಳ 16-39-08 ಎಕರೆ ವಿಸ್ತೀರ್ಣದ ಜಮೀನಿನ ನೊಂದಣಿಯಾಗಿದ್ದು , ಇನ್ನುಳಿದ 18-32-04 ಎಕರೆ ಜಮೀನಿನ ನೇರ ಖರೀದಿಯ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |

| ಕ್ರಮ ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಶರಾ |
|---|---|---|---|
| ೬ | ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕಿನ ಬೈರಮಂಗಲ ಜಲಾಶಯಕ್ಕೆ ಡೈವರ್ಷನ್ ಕಾಲುವೆ ಮತ್ತು ವಿಯರ್ ನಿರ್ಮಿಸುವ ಯೋಜನೆ | 110.00 | ಡೈವರ್ಷನ್ ನಾಲೆಯು ಉದ್ದವು 4.20 ಕಿಮೀ ಇದ್ದು, ಇದರಲ್ಲಿ 2.20 ಕಿಮೀ ಉದ್ದವು ಪೂರ್ಣಗೊಂಡಿರುತ್ತದೆ. ಕೆರೆ ಅಂಗಳದಲ್ಲಿ 10 ಲಕ್ಷ ಕ್ಯೂ.ಮೀ ಹೂಳನ್ನು ತೆಗೆಯಬೇಕಿದ್ದು, 3 ಲಕ್ಷ ಕ್ಯೂ.ಮೀ ಹೂಳನ್ನು ತೆಗೆಯಲಾಗಿದೆ ಮತ್ತು ಕೆರೆಯ ಸುತ್ತ 6 ಕಿಮೀ ರಿಂಗ್ ಬಂಡ್ ನಿರ್ಮಿಸಲಾಗಿದೆ.<br>ಕೋರ್ಟ್ ಆದೇಶದಂತೆ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. |
| 7 | ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಸಬಾ ಹೋಬಳಿಯಲ್ಲಿ ಬರುವ 6 ಸಂಖ್ಯೆ ಕುಂಠಿತ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟುಗಳಿಗೆ ಪುನಶ್ಚೇತನ ಮತ್ತು 16 ಕೆರೆಗಳಿಗೆ ಇಗ್ಗಲೂರು ಬ್ಯಾರೇಜ್‌ನಿಂದ ಬನ್ನಹಳ್ಳಿ ಹತ್ತಿರ ಏತ ನೀರಾವರಿ ಮೂಲಕ ನೀರು ತುಂಬಿಸುವುದು. | 77.00 | ಪಂಪ್ ಹೌಸ್ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>ಮುಖ್ಯ ಏರು ಕೊಳವೆ ಉದ್ದ 15.68 ಕಿ.ಮೀ. ಇದ್ದು, 14.694 ಕಿ.ಮೀ ಉದ್ದಕ್ಕೆ ಜೋಡಣೆ ಆಗಿದ್ದು, ಉಳಿದ ಉದ್ದ 0.985 ಕಿ.ಮೀ ಉದ್ದಕ್ಕೆ ಅಳವಡಿಸುವ ಕಾರ್ಯ ಬಾಕಿ ಇದ್ದು, ಇದರಲ್ಲಿ ಅರಣ್ಯ ಪ್ರದೇಶದಲ್ಲಿ ಅಳವಡಿಸುವ ಉದ್ದ 500 ಮೀ ಆಗಿರುತ್ತದೆ.<br>ವಿತರಣಾ ಏರು ಕೊಳವೆ ಉದ್ದ 15.00 ಕಿ.ಮೀ ಇರುತ್ತದೆ. ಇದರಲ್ಲಿ 2.90 ಕಿ.ಮೀ ಉದ್ದಕ್ಕೆ ಪೈಪಗಳು ಸರಬರಾಜಾಗಿದ್ದು, ಇವುಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br>ಡೆಲಿವರಿ ಚೇಂಬರ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದಂತೆ, 5.00 ಎಂ.ವಿ.ಎ. ವಿದ್ಯುತ್ ಬೇಡಿಕೆಗೆ ಕೆಪಿಟಿಸಿಎಲ್ ಇಲಾಖೆಯಿಂದ ಅನುಮೋದನೆ ದೊರೆತ್ತಿದ್ದು, 66 ಕೆ.ವಿ ವಿದ್ಯುತ್ ಮಾರ್ಗವನ್ನು ಅಳವಡಿಸುವ ಪ್ರಗತಿಯಲ್ಲಿದೆ.<br>ಒಟ್ಟು 35 ಟವರ್‌ಗಳ ಪೈಕಿ 9 ಸಂಖ್ಯೆ ಟವರ್‌ಗಳಿಗೆ ಸ್ಟಬ್ಸ್ ಅಳವಡಿಸಿ ಕಾಂಕ್ರೀಟ್ ಹಾಕಲಾಗಿರುತ್ತದೆ. 10 ಟವರ್‌ಗಳಿಗೆ ಮಣ್ಣು ಅಗೆತವಾಗಿದ್ದು, ಭೂ ಪರಿಹಾರ ವಿತರಣೆ ಬಳಿಕ ಕಾಮಗಾರಿ ಮುಂದುವರೆಸಲಾಗುವುದು.<br>ಸಬ್ ಸ್ಟೇಷನ್ ಕಾಮಗಾರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| ೮ | ಪಾಂಡವಪುರ ತಾಲ್ಲೂಕಿನ ಮಲ್ಲಿಗೆರೆ ಏತ ನೀರಾವರಿ ಯೋಜನೆಯನ್ನು ಅಭಿವೃದ್ಧಿಪಡಿಸಿ ಕೆರೆಗಳಿಗೆ ನೀರು ತುಂಬಿಸುವುದು. | 22.00 | ಇನ್‌ಟೇಕ್ ಚಾನಲ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>2.325 ಕಿ.ಮೀ ಉದ್ದ ರೈಸಿಂಗ್ ಮೈನ್ ಪೈಕಿ 1.90 ಕಿ.ಮೀ ಪೂರ್ಣಗೊಂಡಿರುತ್ತದೆ.<br>32.465 ಕಿ.ಮೀ ಉದ್ದದ ಗ್ರಾವಿಟಿ ಮೈನ್ ಪೈಕಿ 19.916 ಕಿ.ಮೀ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯು ಪ್ರಗತಿಯಲ್ಲಿದೆ.<br>Control Room – Civil work completed. Control panel to be installed, jack well pumps and motors erected.<br>3Nos of 375 HP Motors Procured, 2Nos Erected. |
| ೯ | ತಾರಕ ಯೋಜನೆಯ ಬಲದಂಡೆ ನಾಲೆಯ ಸರಪಳಿ 10 ರಿಂದ 36 ಕಿ.ಮೀ | 14.50 | ಗುತ್ತಿಗೆದಾರರು ಕಾಮಗಾರಿಯನ್ನು ಎರಡು ಹಂತದಲ್ಲಿ ಪ್ರಾರಂಭಿಸಿದ್ದು.<br>26.45 ಕಿಮೀ ಪೈಕಿ ಒಟ್ಟಾರೆಯಾಗಿ 12.50ಕಿಮೀ ಲೈನಿಂಗ್ ಪೂರ್ಣಗೊಂಡಿದೆ. ಉಳಿಕೆ 13.95 ಕಿಮೀ ಸಿ.ಸಿ.ಲೈನಿಂಗ್ ಕಾಮಗಾರಿ ಪ್ರಗತಿ ಮಾಡಬೇಕಿದೆ.<br>ಮ್ಯಾನುವಲ್ ಲೈನಿಂಗ್ 75 ಮೀ ಪೂರ್ಣಗೊಂಡಿದೆ<br>ಒಟ್ಟು 26 ಸಿ.ಡಿ. ಕಾಮಗಾರಿಗಳ ಪೈಕಿ 2 ಅಂಡರ್ ಟನಲ್ ಕಾಮಗಾರಿ ಪೂರ್ಣಗೊಂಡಿದೆ ಶಿಥಿಲವಾಗಿರುವ 24 ಸಿ.ಡಿ.ಗಳ ಪುನರ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.<br>ಗುತ್ತಿಗೆದಾರರು ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ವಿಫಲರಾದ ಕಾರಣ ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ,ಬೆಂಗಳೂರು ರವರ ಪತ್ರ ಸಂಖ್ಯೆ 1121, ದಿ:10-09-2020 ರಂತೆ ಟೆಂಡರ್‌ನ್ನು ರದ್ದುಪಡಿಸಲಾಗಿತ್ತು<br>ಆದರೆ ಗುತ್ತಿಗೆದಾರರು ಕಾಲಾವಧಿ ವಿಸ್ತರಣೆಗೆ ಮನವಿ ಸಲ್ಲಿಸಿದ್ದರ ಮೇರೆಗೆ ನಿಗಮದ ಪತ್ರ ಸಂಖ್ಯೆ 2872, ದಿ: 22-02-2021ರಂತೆ ಟೆಂಡರ್ ರದ್ದತಿಯನ್ನು ಹಿಂಪಡೆಯಲಾಗಿದೆ.<br>ಕಾಮಗಾರಿ ಪ್ರಗತಿಯಲ್ಲಿದೆ. |
| ೧೦ | ಹೆಬ್ಬಳ್ಳ ಯೋಜನೆಯ ಎಡದಂಡೆ ನಾಲೆ ಸರಪಳಿ: 0 ಯಿಂದ 27.20 ಕಿ.ಮೀ | 15.25 | ಆಗಸ್ಟ್ 2019 ರಲ್ಲಿ ಬಿದ್ದ ಭಾರಿ ಮಳೆಯಿಂದ ಉಂಟಾದ ಹಾನಿಯಿಂದ ಹಾಗೂ ಖಾರಿಫ್-2019ರ ಬೆಳೆಗೆ ನೀರು ಬಿಡುಗಡೆ ಮಾಡಿದ್ದರಿಂದ ಕಾಮಗಾರಿಯು ಸ್ಥಗಿತಗೊಂಡಿತ್ತು. ದಿನಾಂಕ 09/01/2020 ರಂದು ಕಾಮಗಾರಿಯನ್ನು ಮನಃ ಪ್ರಾರಂಭಿಸಿ ಪ್ರಗತಿಯಲ್ಲಿರುತ್ತದೆ.<br>27.20 ಕಿಮೀ ಪೈಕಿ ಒಟ್ಟಾರೆ 16.17 ಕಿ.ಮೀ ಸಿ.ಸಿ.ಲೈನಿಂಗ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಉಳಿಕೆ 11.03 ಕಿಮೀ ಸಿ.ಸಿ.ಲೈನಿಂಗ್ ಕಾಮಗಾರಿ ಪ್ರಗತಿ ಮಾಡಬೇಕಿದೆ.<br>ಒಟ್ಟು 63 ಸಿ.ಡಿ. ಕಾಮಗಾರಿಗಳ ಪೈಕಿ ಒಟ್ಟಾರೆ 8 ಪೂರ್ಣಗೊಂಡಿದೆ,ಉಳಿದ 55 ಸಿ.ಡಿ. ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br>ದಿನಾಂಕ 31-07-2022 ರ ವರೆಗೆ ಒಟ್ಟು 272 ದಿನಗಳಿಗೆ ದಿನವೊಂದಕ್ಕೆ ರೂ.325/- ರಂತೆ ದಂಡ ಸಹಿತ ಅವಧಿ ವಿಸ್ತರಣೆಗೆ ಅನುಮೋದನೆ ನೀಡಲಾಗಿದೆ.<br>ಕಾಮಗಾರಿ ಪ್ರಗತಿಯಲ್ಲಿದೆ. |
| 11 | ಹಾರಂಗಿ ಯೋಜನೆಯ ಎಡದಂಡೆ ನಾಲೆಯ ಸರಪಳಿ 85.90 ರಿಂದ 149 ಕಿ.ಮೀ | 62.15 | ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. |

| ಕ್ರಮ ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಷರಾ |
|---|---|---|---|
| 12 | ಕಬಿನಿ ಯೋಜನೆಯಡಿಯಲ್ಲಿ ಬರುವ ಸರ್‌ಕಾಟನ್, ಹಂಪಾಪುರ ಮತ್ತು ಗುಪ್ಪಮ್ಮ ಕಾಲುವೆ | 20.30 | ಸರ್ ಕಾಟನ್ ಕಾಲುವೆ : ಸರ್ ಕಾಟನ್ ನಾಲೆಯ ಉದ್ದ 1.060 ಕಿ.ಮಿ. ಉದ್ದವಿದ್ದು, ಸರಪಳಿ 0.00 ಮೀ ನಿಂದ 1060.00 ಮೀ ವರೆಗೆ ನಾಲೆಯ ತಳಭಾಗದಲ್ಲಿನ ಹೂಳನ್ನು ತೆಗೆದು, ಎರಡು ಕಡೆಯಲ್ಲಿ 0.20 ಮೀ. ದಪ್ಪದ, ಎತ್ತರ 2.85 ಯಿಂದ 3.85 ಮೀವರೆಗೆ ಗೋಡೆಯನ್ನು ನಿರ್ಮಿಸಿ, ತದನಂತರ Portal frame type cut & cover duct ನಿರ್ಮಾಣ ಮಾಡಲಾಗುತ್ತದೆ. ಈ ಕಾಮಗಾರಿಯ cut & cover duct 900 ಮೀ. ಪೂರ್ಣಗೊಂಡಿರುತ್ತದೆ. ಉಳಿಕೆ 100 ಮೀ. ಪ್ರಗತಿಯಲ್ಲಿರುತ್ತದೆ.<br>ಹಂಪಾಪುರ ನಾಲೆ : ಹಂಪಾಪುರ ನಾಲೆಯ ಉದ್ದ 2.125 ಕಿ.ಮಿ. ಉದ್ದವಿದ್ದು, ಸರಪಳಿ 0.00 ಯಿಂದ 2.125 ಕಿ.ಮೀ ವರೆಗಿನ ಕಾಲುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>ಗುಪ್ಪಮ್ಮ ನಾಲೆ : ಗುಪ್ಪಮ್ಮ ಕಾಲುವೆಯ ಉದ್ದ 7.225 ಕಿ.ಮಿ. ಉದ್ದವಿದ್ದು, ಈ ನಾಲೆಯು ಕೊಳ್ಳೇಗಾಲ ಪಟ್ಟಣದ ಗಡಿ ಭಾಗದಲ್ಲಿ 3.725 ಕಿ.ಮಿ. ಉದ್ದ ಹಾಯ್ದು ನಂತರ ಬಯಲು ಪ್ರದೇಶದಲ್ಲಿ 3.50 ಕಿ.ಮಿ. ಉದ್ದ ಹರಿದು ಕಾವೇರಿ ನದಿಯನ್ನು ಸೇರುತ್ತದೆ. ಗುಪ್ಪಮ್ಮ ಕಾಲುವೆಯ ಸ: 0.00 ಕಿ.ಮೀ ಯಿಂದ 3.572 ಕಿ.ಮೀ ವರೆಗಿನ ಕಾಲುವೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 13 | ಕಣ್ವ ಯೋಜನೆಯ ನಾಲೆಗಳ ಆಧುನೀಕರಣ | 38.50 | ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ. . |
| 14 | ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಹೆಬ್ಬಳ್ಳ ಚೆನ್ನಯ್ಯ ನಾಲೆಯ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುವ ಏತ ನೀರಾವರಿ ಕಾಮಗಾರಿ (ತಿಟ್ಟುಮಾರನಹಳ್ಳಿ ಏತ ನೀರಾವರಿ ಯೋಜನೆ) | 44.00 | ಪಂಪ್ ಹೌಸ್‌ನ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>ರೈಸಿಂಗ್ ಮೇನ್ ಸರಪಳಿ 0.00 ಮೀ. ರಿಂದ 3250.00 ಮೀ ರವರೆಗೆ ಪೂರ್ಣಗೊಂಡಿದ್ದು ಸರಪಳಿ 1200.00 ಮೀ. ರಿಂದ 1300.00 ಮೀ ರವರೆಗೆ 100.00 ಮೀಟರ್ ಪ್ರಗತಿಯಲ್ಲಿರುತ್ತದೆ.<br>ಕೆರೆ ತುಂಬಿಸುವ ಯೋಜನೆಯಡಿಯಲ್ಲಿ, ಒಟ್ಟು 17 ಕೆರೆಗಳಲ್ಲಿ 09 ಕೆರೆಗಳ ಲೈನಿಂಗ್ ಪೂರ್ಣಗೊಂಡಿದ್ದು, ಉಳಿದ ಕೆರೆಗಳ ಲೈನಿಂಗ್ ಪ್ರಾರಂಭಿಸಬೇಕಿರುತ್ತದೆ.<br>ಇ.ಓ.ಟಿ. ಕ್ರೇನ್ ಅಳವಡಿಕೆ ಕಾಮಗಾರಿಯ ಪೂರ್ಣಗೊಂಡಿರುತ್ತದೆ<br>ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ |
| 15 | ಕನಕಪುರ ತಾಲ್ಲೂಕು ದೊಡ್ಡಾಲಹಳ್ಳಿ ಹನಿ ನೀರಾವರಿ ಯೋಜನೆ | 70.00 | ಪಂಪ್‌ಹೌಸ್ ಕಾಮಗಾರಿ 90% ಪೂರ್ಣಗೊಂಡಿರುತ್ತದೆ.<br>ರೈಸಿಂಗ್ ಮೇನ್ ಕಾಮಗಾರಿ ಪೂರ್ಣಗೊಂಡಿರುತ್ತದೆ.<br>Out of 27 blocks , 21 blocks are completed (Drip work)<br>Pump and motor inspection is completed supply is awaited.<br>Electrical work estimate is submitted to KPTCL for approval. |
| 16 | ಕೊಡಗು ಜಿಲ್ಲೆಯ ಭಾಗಮಂಡಲದ ಹತ್ತಿರ ಕಾವೇರಿ ನದಿಗೆ ಅಡ್ಡಲಾಗಿ ಮೇಲು ಸೇತುವೆ ನಿರ್ಮಾಣ ಕಾಮಗಾರಿ | 29.62 | 1. Total 194 nos of piles ,194 nos is completed.<br>2. Out of 36 nos of pile caps, 36 nos is completed.<br>3. Out of 36 nos of piers, 36 nos is completed.<br>4. Out of 35 nos of Pier caps, 35 nos is completed<br>5. Out of 33 span of Girders, 33 nos is completed.<br>a. PSC girder- 3 Nos –M-40<br>b. RCC girder- 30 Nos-M-35<br>6. Out of 33 nos of slabs, 30 nos is completed.<br>7. Out of 1200.00m drain, 1200.00m is completed.<br>8. 55% of Road work is Completed.<br>a. Madikeri road - out of 300.00 m, 250.00 m is completed<br>b. Napoklu road - 230.00m road to be started<br>c. Talacauvery road - out of 330.00m, 230.00m is completed |
| 17 | ಕಾವೇರಿ ನದಿಗೆ ಅಡ್ಡಲಾಗಿ ಶ್ರೀರಂಗಪಟ್ಟಣ ತಾಲ್ಲೂಕಿನ ಕಾರೇಕುರ ಗ್ರಾಮದ ಹತ್ತಿರ ಮೇಲು ಸೇತುವೆ ನಿರ್ಮಾಣ ಕಾಮಗಾರಿ | 78.13 | Out of 18 pier, 16 No piers Completed.<br>08 piers, peir cap completed, 12 No piers span Apron completed.02 Nos Pier pedestrain work completed.<br>07 No PSC Girder, 200 mts length retaining wall completed.<br>Out of 8.5km drain 1.650 km road drain work completed.<br>Out of 7.12km, 1.9km ashpalt work in progress.<br>2 No box culvert work completed. |
| 18 | ಕೆ.ಆರ್.ಎಸ್ ಅಣೆಕಟ್ಟೆಯಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ. ವಿಶ್ವೇಶ್ವರಯ್ಯನವರ ಪುತ್ಥಳಿ ನಿರ್ಮಾಣ ಕಾಮಗಾರಿ | 8.50 | ಪ್ರಸ್ತುತ ಮಂಟಪ ನಿರ್ಮಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಶ್ರೀ ನಾಲ್ವಡಿ ಕೃಷ್ಣರಾಜರ ಪುತ್ಥಳಿ ಪೂರ್ಣಗೊಂಡಿದ್ದು, ಶ್ರೀ ವಿಶ್ವೇಶ್ವರಯ್ಯ ರವರ ಪುತ್ಥಳಿ ಕೆತ್ತನೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| 19 | ಬಂಗಾರದೊಡ್ಡಿ ನಾಲೆ ಆಧುನೀಕರಣ ಕಾಮಗಾರಿ. | 14.00 | ಲೈನಿಂಗ್ ಕಾಮಗಾರಿಯಲ್ಲಿ 15.28 ಕಿಮೀ. ಉದ್ದದಲ್ಲಿ 15.28 ಕಿಮೀ ಪೂರ್ಣಗೊಂಡಿರುತ್ತದೆ.<br>ಸಿ.ಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.<br>Work Physically completed. |
| 20 | ಮಾಧವಮಂತ್ರಿ ಅಣೆಕಟ್ಟು ಅಭಿವೃದ್ಧಿಗೊಳಿಸುವುದು | 62.21 | Anecut of length 527.00 m is divided into 20 over flow and 01 non-overflow block.<br>From Block 7, 8 & 15 crest level completed<br>From Block 1 to 6 & 9 to 14 & 16, 17 Bottom encasing, Hearting stilling basin works completed & ogee weir portion upto RL 634.50 completed.<br>Block 1A Earthwork Completed & block 18 Earth work under progress.<br>Over flow section Block 19 & 20 yet to be started. |

| ಕ್ರಮ ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಷರಾ |
|---|---|---|---|
| 21 | ಡಿ.ಡಿ.ಅರಸು ನಾಲೆಯ ಸರಪಳಿ 49.00 ಕಿ.ಮೀ ಯಿಂದ 75.00 ಕಿ.ಮೀ ವರೆಗೆ(ಆಯ್ದ ಭಾಗಗಳಲ್ಲಿ) ಮೆಕ್ಯಾನಿಕಲ್ ಪೇವರ್ ಬಳಸಿ ಸಿ.ಸಿ.ಲೈನಿಂಗ್ ಮಾಡುವ ಕಾಮಗಾರಿ | 24.80 | ಸರಪಳಿ 48.750 ಕೀ.ಮಿ. ನಿಂದ 74.350 ಕಿ.ಮೀ ವರೆಗೆ 25.600 ಕಿ.ಮೀ. ಉದ್ದದ ನಾಲೆಯ ಆಯ್ದ ಭಾಗಗಳಲ್ಲಿ 1.705 ಕಿ.ಮೀ. Good reaches ಹಾಗೂ 2.105 ಕಿ ಮೀ ಅಕ್ವೆಡೆಕ್ಟ್, ಕಟ್ ಅಂಡ್ ಕವರ್ ಹಾಗೂ ಅಡ್ಡಮೋರಿ ಕಾಮಗಾರಿಗಳಿದ್ದು ಸುಮಾರು 21.790ಕಿ.ಮೀ ಮೆಕ್ಯಾನಿಕಲ್ ಪೇವರ್ ಬಳಸಿ ಲೈನಿಂಗ್ ಮಾಡಿ ಆಧುನೀಕರಣಗೊಳಿಸಲು ಅನುವು ಮಾಡಲಾಗಿದೆ.<br>ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 22 | Providing cement concrete road to approach road of Kabini dam (from Kollegowdanahalli circle to Bidarahally circle) and Construction of Bridge across river Kabini at downstream of Kabini Dam." | 50.30 | ಒಟ್ಟು 10.710 ಕಿಮೀ ಪೈಕಿ 8.00 ಕಿಮೀ ಕಾಂಕ್ರೀಟ್ ರಸ್ತೆ ಪೂರ್ಣಗೊಂಡಿದೆ.<br>ಒಟ್ಟು 2.70 ಕಿ.ಮೀ ಸಿ.ಸಿ.ಡ್ರೈನ್ ಕಾಮಗಾರಿಯು ಪೂರ್ಣಗೊಂಡಿದೆ.<br>ಕಬಿನಿ ಆಣೆಕಟ್ಟೆ ಕೆಳಭಾಗದಲ್ಲಿ ನಿರ್ಮಾಣವಾಗುತ್ತಿರುವ ಸೇತುವೆಯ ಎರಡು ಪಿಯರ್‌ಗಳು ಪಿಯರ್ ಕ್ಯಾಪ್‌ವರೆಗೆ ಪೂರ್ಣಗೊಂಡಿರುತ್ತದೆ.<br>ಅಬಟ್‌ಮೆಂಟ್ ಫೌಂಡೇಶನ್ Excavation ಪೂರ್ಣಗೊಂಡಿರುತ್ತದೆ ಮತ್ತು Steel girders fabrication work ಪ್ರಗತಿಯಲ್ಲಿದೆ. |
| 23 | ಕಾಚೇನಹಳ್ಳಿ ಏತ ನೀರಾವರಿ ಯೋಜನೆಯ 3 ನೇ ಹಂತದ ಇಂಟೇಕ್ ಕೆನಾಲ್, ಸಂಪ್, ಪಂಪ್‌ಹೌಸ್, ಎಲೆಕ್ಟ್ರೋ ಮೆಕ್ಯಾನಿಕಲ್ ಕಾಂಪೋನೆಂಟ್ಸ್, ರೈಸಿಂಗ್ ಮೈನ್, ಡೆಲಿವರಿ ಚೇಂಬರ್, ಕೆನಾಲ್ ನೆಟ್‌ವರ್ಕ್ ಕಾಮಗಾರಿಗಳು. | 141.50 | ಕಾಮಗಾರಿ ಪ್ರಗತಿಯಲ್ಲಿದೆ. |
| 24 | ಹಾಸನ ನಗರದಲ್ಲಿನ ಚನ್ನಪಟ್ಟಣ ಕೆರೆಯ ಅಭಿವೃದ್ಧಿ ಸೇರಿದಂತೆ ಪ್ರಮುಖ ಕೆರೆಗಳ ಅಭಿವೃದ್ಧಿ, ಕೆರೆಗಳ ಉದ್ಯಾನವನಗಳ ಅಭಿವೃದ್ಧಿ ಹಾಗೂ ಮೂಲ ಸೌಲಭ್ಯ ಕಲ್ಪಿಸುವ ಕಾಮಗಾರಿ. | 144.00 | ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರಮ ಸಂ | ಯೋಜನೆಯ ಹೆಸರು | ಅಂದಾಜು ಮೊತ್ತ | ಷರಾ |
|---|---|---|---|
| 25 | Earthwork excavation and construction of CD Works and providing cement concrete linling from Ch:5km to 35km of Kamasamudra branch canal of YLBC | 81.00 | ಕಾಮಗಾರಿ ಪ್ರಗತಿಯಲ್ಲಿದೆ. |
| 26 | ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹೊಳೆನರಸೀಪುರ ತಾಲ್ಲೂಕಿನ ಚಾಕೇನಹಳ್ಳಿ ಕೆರೆಗೆ ನೀರನ್ನು ತುಂಬಿಸುವುದು ಹಾಗೂ ಒಂಟಗುಡ್ಡ ಏತ ನೀರಾವರಿ ಯೋಜನೆಯ ನಾಲಾ ನಿರ್ಮಾಣ ಕಾಮಗಾರಿ | 54.00 | ಕಾಮಗಾರಿ ಪ್ರಗತಿಯಲ್ಲಿದೆ. |
| 27 | ಹೇಮಾವತಿ ಬಲಮೇಲ್ದಂಡೆ ನಾಲೆಯ ಸರಪಳಿ 0.00 ಕಿ.ಮೀ ನಿಂದ 96.812 ಕಿ.ಮೀ ವರೆಗಿನ ನಾಲಾ ಆಧುನೀಕರಣ ಕಾಮಗಾರಿ. | 380.07 | ಕಾಮಗಾರಿ ಪ್ರಗತಿಯಲ್ಲಿದೆ. |
| 28 | ಹೊಳೆನರಸೀಪುರ ತಾಲ್ಲೂಕು, ಕಟ್ಟೆಬೆಳಗುಳಿ ಸಮೀಪ ಹೇಮಾವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಶ್ರೀರಾಮದೇವರ ಅಣೆಕಟ್ಟೆಯ ಪುನರ್‌ನಿರ್ಮಾಣ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳು. | 122.00 | ಕಾಮಗಾರಿ ಪ್ರಗತಿಯಲ್ಲಿದೆ. |
| 29 | ಹೇಮಾವತಿ ಬಲದಂಡೆ ನಾಲೆಯ ಸರಪಳಿ 0 ಕಿ.ಮೀ ಯಿಂದ 92.104 ಕಿ.ಮೀ ಉದ್ದದವರೆಗೆ ನಾಲಾ ಆಧುನೀಕರಣ ಕಾಮಗಾರಿ | 422.75 | ಕಾಮಗಾರಿ ಪ್ರಗತಿಯಲ್ಲಿದೆ. |
| 30 | ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಏತ ನೀರಾವರಿ ಯೋಜನೆಯಡಿಯಲ್ಲಿ 599 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ. | 5.95 | ಕಾಮಗಾರಿ ಪ್ರಗತಿಯಲ್ಲಿದೆ. |
| 31 | ಕ್ಯಾತನಹಳ್ಳಿ 2ನೇ ಹಂತದ ಏತ ನೀರಾವರಿ ಯೋಜನೆ – ವೈ.ಎಲ್.ಬಿ.ಸಿ. ಸರಪಳಿ 33.13 ಕಿ.ಮೀ ನಿಂದ ನೀರನ್ನು ಎತ್ತುವುದು (ಯಗಚಿ ಯೋಜನೆ ಯಡಿಯಲ್ಲಿ-5683 ಎಕರೆ ಅಚ್ಚುಕಟ್ಟು | 8.30 | ಕಾಮಗಾರಿ ಪ್ರಗತಿಯಲ್ಲಿದೆ. |
| 32 | ಹಾಸನ ಜಿಲ್ಲೆಯ ನಗರ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ ಕೆರೆ, ಸತ್ಯಮಂಗಲ ಕೆರೆ ಮತ್ತು ಹುಣಸಿನಕೆರೆ ಪುನಶ್ಚೇತನ ಹಾಗೂ ಹಂದಿನಕೆರೆಯಿಂದ ಸತ್ಯಮಂಗಲ ಕೆರೆಗೆ ನೀರು ತುಂಬಿಸುವ ಯೋಜನೆ) | 9.95 | ಕಾಮಗಾರಿ ಪ್ರಗತಿಯಲ್ಲಿದೆ. |
| 33 | ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆ ಶಂಭುದೇವರ ಕೆರೆ ತುಂಬಿಸುವ ಯೋಜನೆ (Augumentation) | 26.00 | ಕಾಮಗಾರಿ ಪ್ರಗತಿಯಲ್ಲಿದೆ. |
| 34 | ಹೇಮಾವತಿ ಯೋಜನೆ ವೈ-ನಾಲೆ 15.727 ಕಿ.ಮೀ.ನಿಂದ 21.175 ಕಿ.ಮೀ.ವರೆಗೆ ಹಾಗೂ ತುಮಕೂರು ಶಾಖಾ ನಾಲೆ 0.00 ಕಿ.ಮೀ.ನಿಂದ 70.00 ಕಿ.ಮೀ.ವರೆಗೆ ನಾಲೆಯ ರೀಮಾಡಲಿಂಗ್ (ನಾಲೆಯ ಆಧುನೀಕರಣ) ಕಾಮಗಾರಿ. | 475.00 | ಪ್ರಗತಿಯಲ್ಲಿರುತ್ತದೆ. |
| 35 | ತುಮಕೂರು ಶಾಖಾ ನಾಲೆ 70.36 ಕಿ.ಮೀ.ನಿಂದ 166.90 ಕಿ.ಮೀ. ವರೆಗೆ ನಾಲೆಯ ರೀಮಾಡಲಿಂಗ್ (ನಾಲೆಯ ಆಧುನೀಕರಣ) ಕಾಮಗಾರಿ. | 550.00 | ಪ್ರಗತಿಯಲ್ಲಿರುತ್ತದೆ. |
| 36 | ತುಮಕೂರು ಶಾಖಾ ನಾಲೆಯಿಂದ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಆಯ್ದ 26 ಕೆರೆಗಳಿಗೆ ಕುಡಿಯುವ ನೀರು ಸರಬರಾಜು ಮತ್ತು ಅಡ್ಡಮೋರಿ ನಿರ್ಮಾನ ಬಾಕಿ ಕಾಮಗಾರಿ. | 98.50 | ಪ್ರಗತಿಯಲ್ಲಿರುತ್ತದೆ. |
| 37 | ಕಡಬಾ ಕೆರೆಯಿಂದ ಹೆಚ್.ಎ.ಎಲ್ ಘಟಕ ಮತ್ತು ಎರಡು ಸಂಖ್ಯೆ ಕಿರುನೀರು ಸರಬರಾಜು ಯೋಜನೆಗಳಿಗೆ ನೀರನ್ನು ಒದಗಿಸುವಲ್ಲಿ ತುಮಕೂರು ಶಾಖಾ ನಾಲೆ ಅಡಿಯ ವಿತರಣಾ ನಾಲೆ 12ರ ಅಭಿವೃದ್ಧಿ ಕಾಮಗಾರಿ. | 25.00 | ಟೆಂಡರ್ ಅನುಮೋದನೆ ಹಂತದಲ್ಲಿರುತ್ತದೆ. |
| 38 | ಹೆರೆಯೂರು ಕೆರೆಯಿಂದ ಗುಬ್ಬಿ ಪಟ್ಟಣಕ್ಕೆ ಕುಡಿಯುವ ನೀರು ಒದಗಿಸಲು ತುಮಕೂರು ಶಾಖಾ ನಾಲೆ ಅಡಿಯ ವಿತರಣಾ ನಾಲೆ 15ರ ಅಭಿವೃದ್ಧಿ ಕಾಮಗಾರಿ. | 22.00 | ಟೆಂಡರ್ ಅನುಮೋದನೆ ಹಂತದಲ್ಲಿರುತ್ತದೆ. |
| 39 | ಕುಣಿಗಲ್ ತಾಲ್ಲೂಕು ಮಾರ್ಕೊನಹಳ್ಳಿ ಜಲಾಶಯದಿಂದ ಮಂಗಳ ಜಲಾಶಯಕ್ಕೆ ಫೀಡರ್ ಕೆನಾಲ್ ನಿರ್ಮಾಣ ಕಾಮಗಾರಿ. | 6.76 | ಟೆಂಡರ್ ಅನುಮೋದನೆ ಹಂತದಲ್ಲಿರುತ್ತದೆ. |

# ಕರ್ನಾಟಕ ನೀರಾವರಿ ನಿಗಮ ನಿಯಮಿತ

## ಅನುಬಂಧ-4

| ಕ್ರ. ಸಂ. | ಯೋಜನೆಗಳು | ಯೋಜಿತ ನೀರಾವರಿ ಸಾಮರ್ಥ್ಯ (ಹೆ.ಗಳಲ್ಲಿ) | ಷರಾ |
|---|---|---|---|
| 1 | 2 | 3 | 9 |
| I | ನೀರಾವರಿ (ಉತ್ತರ)ವಲಯ, ಬೆಳಗಾವಿ | | |
| 1 | ಘಟಪ್ರಭಾ ಎಡದಂಡೆ ಕಾಲುವೆ ಆಧುನೀಕರಣ | | ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. |
| 2 | ಮುರುಗುಡು ಏ.ನೀ.ಯೋ. | 1939 | ಪೂರ್ಣಗೊಳ್ಳುವ ಹಂತದಲ್ಲಿದೆ. |
| 3 | ಚಚಡಿ ಏ.ನೀ.ಯೋ. | 2718 | ಪ್ರಗತಿಯಲ್ಲಿದೆ. |
| 4 | ದೂದಗಂಗಾ | 15167 | ಸ್ಥಗಿತಗೊಂಡಿರುತ್ತದೆ. |
| 5 | ಬಳ್ಳಾರಿನಾಲಾ | 8200 | ಪ್ರಗತಿಯಲ್ಲಿದೆ. |
| 6 | ಕಿಣೆಯೇ | 1200 | ಪೂರ್ಣಗೊಳ್ಳುವ ಹಂತದಲ್ಲಿದೆ. |
| 7 | ಶ್ರೀ ವೀರಭದ್ರೇಶ್ವರ ಏ.ನೀ.ಯೋ | 17377 | ಪ್ರಗತಿಯಲ್ಲಿದೆ. |
| 8 | ಬಸವೇಶ್ವರ (ಕೆಂಪವಾಡ) ಏ.ನೀ.ಯೋ | 27462 | ಪ್ರಗತಿಯಲ್ಲಿದೆ. |
| 9 | ತುಬಚಿ-ಬಬಲೇಶ್ವರ ಏ.ನೀ.ಯೋ | 52700 | ಪ್ರಗತಿಯಲ್ಲಿದೆ. |
| 10 | ವೆಂಕಟೇಶ್ವರ ಏ.ನೀ.ಯೋ | 7200 | ಪ್ರಗತಿಯಲ್ಲಿದೆ. |
| 11 | ಸಾಲಾಪುರ ಏ.ನೀ.ಯೋ. | 13000 | ಪ್ರಗತಿಯಲ್ಲಿದೆ. |
| 12 | ಗೊಡಚಿನಮಲ್ಕಿ ಏ.ನೀ.ಯೋ. | 2568 | ಪ್ರಗತಿಯಲ್ಲಿದೆ. |
| 13 | ಅಡವಿ-ಸಿದ್ದೇಶ್ವರ ಏ.ನೀ.ಯೋ. | 1200 | ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |
| 14 | ಶಂಕರಲಿಂಗೇಶ್ವರ ಏ.ನೀ.ಯೋ | 1200 | ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |
| | ಒಟ್ಟು | 151931 | |
| II | ಮಲಪ್ರಭಾ ಯೋಜನಾ ವಲಯ, ಧಾರವಾಡ | | |
| 15 | ಶಿಗ್ಗಾಂವ್ ಏ.ನೀ.ಯೋ. | 13500 | ಪ್ರಗತಿಯಲ್ಲಿದೆ. |
| 16 | ಸವಣೂರು ಏ.ನೀ.ಯೋ | 15500 | ಪ್ರಗತಿಯಲ್ಲಿದೆ. |
| | ಒಟ್ಟು | 29000 | |
| III | ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ | | |
| 17 | ತುಂಗಾ ಮೇಲ್ದಂಡೆ ಯೋಜನೆ | 80494 | ಬಹುತೇಕ ಪೂರ್ಣಗೊಂಡಿದೆ. |
| 18 | ದಂಡಾವತಿ | 6933 | ಸ್ಥಗಿತಗೊಂಡಿರುತ್ತದೆ. |
| 19 | ವಾರಾಹಿ ಯೋಜನೆ | 15702 | ಪ್ರಗತಿಯಲ್ಲಿದೆ. |

| ಕ್ರ. ಸಂ. | ಯೋಜನೆಗಳು | ಯೋಜಿತ ನೀರಾವರಿ ಸಾಮರ್ಥ್ಯ (ಹೆ.ಗಳಲ್ಲಿ) | ಷರಾ |
|---|---|---|---|
| 1 | 2 | 3 | 9 |
| 20 | ತುಂಗಾ ಅಣೆಕಟ್ಟು ಕಾಲುವೆ | 8704 | ಯೋಜನೆ ಪೂರ್ಣಗೊಂಡಿದ್ದು, ಆಧುನೀಕರಣ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. |
| 21 | ಎಣ್ಣೆಹೊಳೆ ಏ.ನೀ.ಯೋ. | 1500 | ಪೂರ್ಣಗೊಳಿಸಿ ಲೋಕಾರ್ಪಣೆ ಗೊಳಿಸಲಾಗಿದೆ. |
| 22 | ಸೌಕೂರು ಏ.ನೀ.ಯೋ. | 1350 | ಪೂರ್ಣಗೊಳಿಸಿ ಲೋಕಾರ್ಪಣೆ ಗೊಳಿಸಲಾಗಿದೆ. |
| 23 | ಕಸಬಾ ಏ.ನೀ.ಯೋ. | 3430 | ಬಹುತೇಕ ಪೂರ್ಣಗೊಂಡಿದೆ. |
| 24 | ಬೆಳ್ತಂಗಡಿ ಏ.ನೀ.ಯೋ. | 1100 | ಪ್ರಗತಿಯಲ್ಲಿದೆ. |
| | ಒಟ್ಟು | 119213 | |
| IV | ನೀರಾವರಿ ಯೋಜನಾ ವಲಯ, ಕಲಬುರಗಿ | | |
| 25 | ಕಾರಂಜಾ | 29227 | ಪೂರ್ಣಗೊಳ್ಳುವ ಹಂತದಲ್ಲಿದೆ. |
| 26 | ಕಾರಂಜಾ ಆಧುನೀಕರಣ | | ಪ್ರಗತಿಯಲ್ಲಿದೆ. |
| | ಒಟ್ಟು | 29227 | |
| V | ನೀರಾವರಿ ಕೇಂದ್ರ ವಲಯ, ಮುನಿರಾಬಾದ್ | | |
| 27 | ಸಿಂಗಟಾಲೂರು ಏ.ನೀ.ಯೋ. | 107380 | ಪ್ರಗತಿಯಲ್ಲಿದೆ. |
| 28 | ಅಳವಂಡಿ-ಬೆಟಗೇರಿ ಏ.ನೀ.ಯೋ. | 2425 | ಪ್ರಗತಿಯಲ್ಲಿದೆ. |
| 29 | ಬಹದ್ದೂರ್ ಬಂಡಿ ಏ.ನೀ.ಯೋ. | 5256 | ಪ್ರಗತಿಯಲ್ಲಿದೆ. |
| 30 | ಮಸ್ಕಿನಾಲಾ ಆಧುನೀಕರಣ ಯೋಜನೆ | 3001 | ಯೋಜನೆ ಪೂರ್ಣಗೊಂಡಿದ್ದು, ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 31 | ತುಂಗಭದ್ರಾ ಆಧುನೀಕರಣ ಯೋಜನೆ | 362938 | |
| 32 | ವಿಜಯನಗರ ಆಧುನೀಕರಣ ಕಾಲುವೆ | 11222 | |
| | ಒಟ್ಟು | 492222 | |
| | ಒಟ್ಟು ಮೊತ್ತ | 821593 | |